# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 484 |
| ಸದಸ್ಯರ ಹೆಸರು | ಶ್ರೀ ಶಶೀಲ್ ಜಿ. ನಮೋಶಿ ( ಶಿಕ್ಷಕರ ಕ್ಷೇತ್ರ ) |
| ಉತ್ತರಿಸಬೇಕಾದ ದಿನಾಂಕ | 30.01.2026 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಅಡಿಯಲ್ಲಿ ಬರುವ ಸರ್ಕಾರಿ ಹಾಗೂ ಅನುದಾನಿತ ನೌಕರರಿಗೆ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ವಿತರಣೆ ಮಾಡುವಾಗ ಅನುಸರಿಸುತ್ತಿರುವ ನಿಯಮಗಳು ಮತ್ತು ಮಾನದಂಡಗಳು ಯಾವುವು; | ಭಾರತ ಸಂವಿಧಾನ ಅನುಚ್ಛೇದ 15(4) ರನ್ವಯ ಶೈಕ್ಷಣಿಕ ಮತ್ತು 16(4) ರನ್ವಯ ಉದ್ಯೋಗದ ಮೀಸಲಾತಿಗಾಗಿ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಜಾತಿ ಪ್ರಮಾಣ ಪತ್ರವನ್ನು ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳು, ಮೀಸಲಾತಿ), ಅಧಿನಿಯಮ-1990 ಹಾಗೂ ನಿಯಮಗಳು-1992 ರಡಿ ನೀಡಲಾಗುತ್ತಿದೆ.<br><br>ಪ್ರಸ್ತುತ, ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30.03.2002ರಂತೆ ಪ್ರವರ್ಗವಾರು ಈ ಕೆಳಕಂಡಂತೆ ಮೀಸಲಾತಿಯನ್ನು ನಿಗದಿಪಡಿಸಲಾಗಿದೆ:<br><br>ಪ್ರವರ್ಗ-1 — 4%<br>ಪ್ರವರ್ಗ-2ಎ — 15<br>ಪ್ರವರ್ಗ- 2ಬಿ — 4%<br>ಪ್ರವರ್ಗ-3ಎ — 4%<br>ಪ್ರವರ್ಗ- 3ಬಿ — 5%<br><br>ಮೀಸಲಾತಿಯನ್ನು ನೀಡುವಾಗ ಕೆನೆಪದರ ನೀತಿಯನ್ನು ಅಳವಡಿಸಿಕೊಳ್ಳಲಾಗಿದೆ. ಪ್ರವರ್ಗ-1, ರಡಿ ಬರುವ ಅಭ್ಯರ್ಥಿಗಳಿಗೆ ಕೆನೆಪದರ ನೀತಿ ಅನ್ವಯಿಸುವುದಿಲ್ಲ. ಮುಂದುವರೆದು, ಅಭ್ಯರ್ಥಿಯ ಮತ್ತು ಅವರ ತಂದೆ / ತಾಯಿ / ಪೋಷಕರ ವಾರ್ಷಿಕ ಆದಾಯ ಮಿತಿಯನ್ನು ರೂ.8.00 ಲಕ್ಷಗಳಿಗೆ ನಿಗದಿಗೊಳಿಸಲಾಗಿರುತ್ತದೆ. ಅಭ್ಯರ್ಥಿಯ ಮತ್ತು ಅವರ ತಂದೆ / ತಾಯಿ / ಪೋಷಕರು ಸರ್ಕಾರದ ಒಂದನೇ ಅಥವಾ ಎರಡನೇ ದರ್ಜೆಯ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರೆ ಮೀಸಲಾತಿಯನ್ನು ಪಡೆಯಲು ಅರ್ಹರಿರುವುದಿಲ್ಲ .<br><br>ಅಭ್ಯರ್ಥಿಯ ಮತ್ತು ಅವರ ತಂದೆ / ತಾಯಿ / ಪೋಷಕರು ಸೇರಿದಂತೆ ಕರ್ನಾಟಕ ಭೂ-ಸುಧಾರಣೆ ಕಾಯ್ದೆ 1961 ರಡಿಯಲ್ಲಿ ನಿಗದಿಪಡಿಸಿರುವ 10 ಯೂನಿಟ್ ಕೃಷಿ ಭೂಮಿಗಿಂತ ಹೆಚ್ಚು ಕೃಷಿ ಭೂಮಿ ಹೊಂದಿರುವವರು ಆದರೆ ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುವ ಭೂಮಿಗೆ ಸಂಬಂಧಿಸಿದಂತೆ 20 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರು ಮೀಸಲಾತಿ ಪಡೆಯಲು ಅರ್ಹರಿರುವುದಿಲ್ಲ . |

| | | |
|---|---|---|
| ಆ) | ರಾಜ್ಯ ಸರ್ಕಾರ ಆದಾಯ ಪ್ರಮಾಣ ಪತ್ರ ನೀಡುವಲ್ಲಿ, ಕೇಂದ್ರ ಸರ್ಕಾರದ 1993 ರ ಅಧಿಸೂಚನೆಯಂತೆ ಕೃಷಿ ಮತ್ತು ವೇತನ ಆದಾಯವನ್ನು ಹೊರಗಿಟ್ಟು ಕೆನೆಪದರ ನೀತಿ ಅನುಸರಿಸಬೇಕು ಎಂಬ ನಿಯಮಗಳು ಮತ್ತು ಅಧಿಸೂಚನೆಗಳನ್ನು ಪಾಲಿಸುತ್ತಿದೆಯೇ; | ಭಾರತ ಸಂವಿಧಾನದ ಅನುಚ್ಛೇಧ 342- ಎ (3) ರಲ್ಲಿ ಈ ಕೆಳಕಂಡಂತೆ ಅಧಿಸೂಚಿಸಲಾಗಿದೆ:<br>(3) Not withstanding any contained in clauses (1) and (2) every State or Union territory may, by law, Prepare and maintain, for its own purposes, a list of socially and educationally backward classes, entries in which may be different from the Central List.<br>ಅದರಂತೆ ರಾಜ್ಯ ಸರ್ಕಾರವು ತನ್ನದೇ ಆದ ಮೀಸಲಾತಿ / ಕೆನೆಪದರ ನೀತಿಯನ್ನು ಆಳವಡಿಸಿಕೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ 1993 ರ ಅಧಿಸೂಚನೆಯು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವ ಶೈಕ್ಷಣಿಕ ಮತ್ತು ಉದ್ಯೋಗದ ಮೀಸಲಾತಿಗೆ ಅನ್ವಯವಾಗುವುದಿಲ್ಲ . |
| ಇ) | ಇತ್ತೀಚೆಗೆ ರಾಜ್ಯ ಕಂದಾಯ ಇಲಾಖೆಯು ಸಮಾಜ ಕಲ್ಯಾಣ ಇಲಾಖೆಯ ನಿಯಮಗಳ ನಿರ್ದೇಶನದಂತೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವಾಗ ಕೇಂದ್ರ ಸರ್ಕಾರ ರೂಪಿಸಿರುವ ನಿಯಮ ಹಾಗೂ ಅಧಿಸೂಚನೆಗಳನ್ನು ಹೊರತುಪಡಿಸಿ ಭಿನ್ನ ಕೆನೆಪದರ ನೀತಿ ಅನ್ವಯಿಸುತ್ತಿರುವುದರಿಂದ ವೇತನದಾರರ ಮಕ್ಕಳು ಅಖಿಲ ಭಾರತ ಹಾಗೂ ರಾಜ್ಯ ಕೋಟಾದಡಿ ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ಇತರೆ ವೃತ್ತಿಪರ ಪ್ರವೇಶ ಪಡೆಯುವಾಗ ಅವಕಾಶ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು; | ಯಾವ ಸಮುದಾಯ / ಜಾತಿಯು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವ ಶಿಕ್ಷಣ ಮತ್ತು ಉದ್ಯೋಗದ ಮೀಸಲಾತಿಗಾಗಿ ಗುರುತಿಸಲ್ಪಟ್ಟಿರುವ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿದ್ದಲ್ಲಿ, ಕೇಂದ್ರ ಸರ್ಕಾರ ನಿಗದಿಪಡಿಸಿರುವ ಮೀಸಲಾತಿ ಹಾಗೂ ಕೆನೆಪದರ ನೀತಿಯಂತೆ ಅಖಿಲ ಭಾರತ ಕೋಟಾದಡಿ ವೈದ್ಯಕೀಯ ಮತ್ತು ಇತರೆ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ಮೀಸಲಾತಿಯನ್ನು ಪಡೆಯಬಹುದಾಗಿದೆ.<br>ಮುಂದುವರೆದು, ರಾಜ್ಯ ಸರ್ಕಾರವು ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಹೊರಡಿಸಲಾಗಿರುವ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30.03.2002 ರಂತೆ ಅರ್ಹ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ರಾಜ್ಯದಲ್ಲಿ ಮೀಸಲಾತಿಯನ್ನು ಪಡೆಯ ಬಹುದಾಗಿರುತ್ತದೆ.<br>ಆದ್ದರಿಂದ ಮೀಸಲಾತಿ / ಕೆನೆಪದರ ನೀತಿ ನಿಯಮಗಳ ಪ್ರಕಾರ ಅರ್ಹರಿರುವ ವೇತನದಾರರ ಮಕ್ಕಳು ಅಖಿಲ ಭಾರತ ಹಾಗೂ ರಾಜ್ಯ ಕೋಟಾದಡಿ ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ಇತರೆ ವೃತ್ತಿಪರ ಪ್ರವೇಶ ಪಡೆಯುವಾಗ ಅವಕಾಶ ವಂಚಿತರಾಗುತ್ತಿರುವುದಿಲ್ಲ. |

| | | |
|---|---|---|
| ಈ) | ರಾಷ್ಟ್ರಮಟ್ಟದ ಪ್ರವೇಶ ಪರೀಕ್ಷೆ ಬರೆದು ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪೋಷಕರ ವೇತನ ಆದಾಯ 8 ಲಕ್ಷಕ್ಕಿಂತ ಹೆಚ್ಚಿದ್ದರೂ ಅಂತಹ ಮಕ್ಕಳಿಗೆ ಅಖಿಲ ಭಾರತ ಕೋಟಾದಡಿ ಪ್ರವೇಶ ನೀಡಲಾಗುತ್ತಿದ್ದು, ಅದೇ ವಿದ್ಯಾರ್ಥಿಗಳು ರಾಜ್ಯದ ಕೋಟಾದಡಿ ಪ್ರವೇಶ ಪಡೆಯುವಾಗ ಕೆನೆಪದರ ನೀತಿ ಅನ್ವಯಿಸಲಾಗುತ್ತಿದ್ದು, ಅವಕಾಶ ವಂಚಿತರಾಗುವುದಕ್ಕೆ ಸರ್ಕಾರವೇ ನೇರ ಹೊಣೆಯಾಗುತ್ತಿರುವುದರಿಂದ ಈ ಬಗ್ಗೆ ಕೈಗೊಂಡ ಕ್ರಮಗಳೇನು; | ಭಾರತ ಸರ್ಕಾರದ ಅಧಿಕೃತ ಜ್ಞಾಪನ ದಿನಾಂಕ: 13.09.2017 ರನ್ವಯ ಪೋಷಕರ ಆದಾಯ ಮಿತಿಯನ್ನು ರೂ 8.00 ಲಕ್ಷಗಳಿಗೆ ನಿಗದಿಪಡಿಸಲಾಗಿರುತ್ತದೆ. ಅದರಂತೆ ರಾಜ್ಯ ಸರ್ಕಾರವು ಸಹ ದಿನಾಂಕ:14.09.2018ರ ಆದೇಶದಲ್ಲಿ ಅಭ್ಯರ್ಥಿಯ / ಪೋಷಕರ ವಾರ್ಷಿಕ ಒಟ್ಟು ಆದಾಯ ಮಿತಿಯನ್ನು ರೂ 8.00 ಲಕ್ಷಗಳಿಗೆ ನಿಗದಿಪಡಿಸಲಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳ / ಪೋಷಕರ ಆದಾಯವು ರೂ.8.00 ಲಕ್ಷಗಳು ಮೀರಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಶೈಕ್ಷಣಿಕ ಮತ್ತು ಉದ್ಯೋಗದಲ್ಲಿ ಮೀಸಲಾತಿ ಪಡೆಯಲು ಅವಕಾಶ ಇರುವುದಿಲ್ಲ. |
| ಉ) | ಭಾರತದ ಸಂವಿಧಾನದ ಅನುಚ್ಛೇದ 342-ಎ(3) ನಲ್ಲಿ ತಿಳಿಸಿರುವಂತೆ "ಉಪವಿಧಿ (1) ಮತ್ತು (2) ನ್ನು ಒಳಗೊಂಡಂತೆ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವು ಕಾನೂನಿನ ಮೂಲಕ ತನ್ನ ಸ್ವಂತ ಉದ್ದೇಶಗಳಿಗಾಗಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಪಟ್ಟಿಯನ್ನು (ಮೀಸಲಾತಿ / ಕೆನೆಪದರ ನೀತಿಯನ್ನು) ಸಿದ್ಧಪಡಿಸಬಹುದು ಮತ್ತು ನಿರ್ವಹಿಸಬಹುದು ಹಾಗೂ ಅದರಲ್ಲಿರುವ ನಮೂದುಗಳು ಕೇಂದ್ರದ ಪಟ್ಟಿಯಿಂದ ಭಿನ್ನವಾಗಿರಬಹುದು" ಎಂದು ತಿಳಿಸಿದ್ದು, ರಾಜ್ಯ ಸರ್ಕಾರವು ನಮ್ಮ ರಾಜ್ಯದ ಸರ್ಕಾರಿ ನೌಕರರ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ನೌಕರರಿಗೆ ಆದಾಯ ಪ್ರಮಾಣ ಪತ್ರ ನೀಡುವಲ್ಲಿ ಕೇಂದ್ರ ಸರ್ಕಾರದ 1993 ರ ಅಧಿಸೂಚನೆಯಂತೆ ಕೃಷಿ ಮತ್ತು ವೇತನ ಆದಾಯವನ್ನು ಹೊರತುಪಡಿಸಿ ಕೆನೆಪದರ ನೀತಿಯನ್ನು ಆಳವಡಿಸ ಬಹುದಲ್ಲವೇ; ಇದರಿಂದ ಸಾವಿರಾರು ಮಕ್ಕಳಿಗೆ ಅನುಕೂಲವಾಗುವುದಿಲ್ಲವೇ; ಈ ಬಗ್ಗೆ ಸರ್ಕಾರದ ನಿಲುವೇನು? | ಭಾರತದ ಸಂವಿಧಾನದ ಅನುಚ್ಛೇದ 342-ಎ (3) ರಂತೆ ರಾಜ್ಯ ಸರ್ಕಾರವು ತನ್ನದೇ ಆದ ಮೀಸಲಾತಿ / ಕೆನೆಪದರ ನೀತಿಯನ್ನು ಶಿಕ್ಷಣ ಮತ್ತು ಉದ್ಯೋಗದ ಮೀಸಲಾತಿಗೆ ಆಳವಡಿಸಿ ಕೊಳ್ಳಬಹುದಾಗಿದೆ.<br>1. ಅದರಂತೆ ರಾಜ್ಯ ಸರ್ಕಾರವು ಸಹ ದಿನಾಂಕ:14.09.2018ರ ಆದೇಶದಲ್ಲಿ ಅಭ್ಯರ್ಥಿಯ / ಪೋಷಕರ ವಾರ್ಷಿಕ ಒಟ್ಟು ಆದಾಯ ಮಿತಿಯನ್ನು ರೂ.8.00 ಲಕ್ಷಗಳಿಗೆ ನಿಗದಿಪಡಿಸಲಾಗಿದೆ.<br>2. ಮುಂದುವರೆದು, ರಾಜ್ಯ ಸರ್ಕಾರವು ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಹೊರಡಿಸಲಾಗಿರುವ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30.03.2002 ರಂತೆ ಅರ್ಹ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ರಾಜ್ಯದಲ್ಲಿ ಮೀಸಲಾತಿಯನ್ನು ಪಡೆಯ ಬಹುದಾಗಿರುತ್ತದೆ. |

**ಸಂಖ್ಯೆ: ಹಿಂವಕ 38 ಬಿಸಿಎ 2026**

**(ಶಿವರಾಜ ಎಸ್. ತಂಗಡಗಿ)**
**ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ**
**ಕನ್ನಡ ಮತ್ತು ಸಂಸ್ಕೃತಿ ಸಚಿವರು**